2) ADB ಯೋಜನೆಯು ಪ್ರಾರಂಭ ಆಗುವವರೆಗೆ ಸಮುದ್ರ ತಡೆಯಲ್ಲಿ ವಾಸಮಾಡುತ್ತಿರುವ ಮೀನುಗಾರರ ಹಾಗೂ ಜನ ಸಾಮಾನ್ಯರ ರಕ್ಷಣೆಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜೆ ಕೃಷ್ಣ ಪಾಲೇಮಾರ್(ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):

1) ಉಳ್ಳಾಲದಲ್ಲಿ ಕಡಲ ಕೊರೆತ ನಿಯಂತ್ರಿಸುವ ಸಲುವಾಗಿ A.D.B. ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನಾ ನಿರ್ವಹಣಾ ಘಟಕವನ್ನು (P.M.U) ಮಂಗಳೂರು ಕೇಂದ್ರ ಸ್ಥಾನದಲ್ಲಿ ಸರ್ಕಾರದ ಆದೇಶ ಸಂಖ್ಯೆ PWD 178 PSP 2009, Dated 26.12.2009ರ ಪ್ರಕಾರ ಸ್ಥಾಪಿಸಲಾಗಿರುತ್ತದೆ. ಸದರಿ ಯೋಜನಾ ಘಟಕಕ್ಕೆ ಸಧ್ಯಕ್ಕೆ ಖಾಯಂ ಅಧಿಕಾರಿಗಳನ್ನು ನೇಮಿಸಿರುವುದಿಲ್ಲ. ಆದರೆ ಇಲಾಖೆಯಲ್ಲಿ ಲಭ್ಯವಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಈ ಸಂಬಂಧ ಕರ್ತವ್ಯ ನಿರ್ವಹಿಸುವ ಬಗ್ಗೆ ಮುಂದಿನ ಆದೇಶದವರೆಗೆ ತಾತ್ಕಾಲಿಕ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

2) ADB ಯೋಜನೆಯು ಪ್ರಾರಂಭವಾಗುವವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಳ್ಳಾಲ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಮೀನುಗಾರರ ಹಾಗೂ ಜನ ಸಾಮಾನ್ಯರಿಗೆ ಸಮುದ್ರ ಕೊರೆತದಿಂದ ಆಗಬಹುದಾದ ಅನಾಹುತಗಳನ್ನು ತಪ್ಪಿಸಲು ತುರ್ತು ಸಂರಕ್ಷಣಾ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಉಳ್ಳಾಲದ ಕೈಕೋ, ಮುಕ್ಕಚ್ಚೇರಿ ಮತ್ತು ಹಿಲಾರಿ ನಗರ ಪ್ರದೇಶಗಳಲ್ಲಿ ತುರ್ತು ಸಂರಕ್ಷಣೆ ಕಾಮಗಾರಿ ಕೈಗೊಳ್ಳಲು ಇಲಾಖಾ ಅನುದಾನದಿಂದ ರೂ. 30.00 ಲಕ್ಷಗಳ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ ಪ್ರದೇಶಗಳಿಗೆ ಸಮುದ್ರ ಕೊರೆತದ ತೀವ್ರತೆಗನುಗುಣವಾಗಿ ಸಂರಕ್ಷಣೆ ಕಾಮಗಾರಿಯನ್ನು ಇಲಾಖೆಯ / ಜಿಲ್ಲಾಡಳಿತದ ಅನುದಾನದ ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು.

ಎ ಪಿ ಎಮ್ ಸಿ ಯಾರ್ಡ್‌ನಲ್ಲಿ ವ್ಯಾಪಾರಸ್ಥರ ಮೇಲೆ ಹಾಕಿರುವ ಮೊಕದ್ದಮೆಗಳು

195 (549) ಶ್ರೀ ಖಾದರ್ ಯು ಟಿ:(ಮಂಗಳೂರು) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಎ.ಪಿ.ಎಂ.ಸಿ. ಯಾರ್ಡಿನಲ್ಲಿ ವ್ಯಾಪಾರಸ್ಥರ ಮೇಲೆ ಹಾಕಿದ ಕೇಸು (ಮೊಕದ್ದಮೆ)ಗಳನ್ನು ಸರ್ಕಾರ ಹಿಂದಕ್ಕೆ ಪಡೆದಿದೆಯೇ:

ಆ) ಹಾಗಿದ್ದಲ್ಲಿ, ಕೇಸು (ಮೊಕದ್ದಮೆ)ಗಳನ್ನು ಹಿಂದಕ್ಕೆ ಪಡೆದಿದ್ದರೂ ಸ್ಥಳೀಯ ಎ.ಪಿ.ಎಂ.ಸಿ.ಯವರು ಕೇಸು (ಮೊಕದ್ದಮೆ)ಗಳನ್ನು ಹಿಂದಕ್ಕೆ ಪಡೆಯುವಲ್ಲಿ ತಕರಾರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) –ಇಲ್ಲ–

ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು 40 ಮತ್ತು 77 ಪೇಟೆ ಕಾರ್ಯಕರ್ತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದು, ಅದನ್ನು ಹಿಂಪಡೆಯಲು ಮಂಗಳೂರು ಸಮಿತಿಯೇ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ಬಗ್ಗೆ ಮಾರುಕಟ್ಟೆ ಸಮಿತಿಯು ಪುನರ್ ಪರಿಶೀಲಿಸಿ ಸಭೆಯಲ್ಲಿ ನಿರ್ಣಯಿಸಿ ಅಗತ್ಯ ದಾಖಲೆ/ಮಾಹಿತಿಯೊಂದಿಗೆ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸೂಕ್ತ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸರ್ಕಾರವು ಸ್ಪಷ್ಟೀಕರಣ ನೀಡಿದೆ.

ಆ) ಕೃಷಿ ಮಾರಾಟ ನಿರ್ದೇಶನಾಲಯದಿಂದ ಸೂಚನೆ ನೀಡುವವರೆಗೆ 77 ಪೇಟೆ ಕಾರ್ಯಕರ್ತರ ವಿರುದ್ಧ ಮೊಕದ್ದಮೆ ದಾಖಲಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಮಂಗಳೂರು ಸಮಿತಿಯ ಕಾರ್ಯದರ್ಶಿಗೆ ದಿನಾಂಕ: 04/10/2008ರಲ್ಲಿ ಸೂಚನೆ ನೀಡಿದೆ. ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 14024/2008 ದಾಖಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:26/02/2009ರ ಆದೇಶದಲ್ಲಿ ದಿನಾಂಕ: 04/10/2008ರಲ್ಲಿ ಸಮಿತಿಗೆ ನೀಡಿದೆ. ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 14024/2008 ದಾಖಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:26/02/2009 ರ ಆದೇಶದಲ್ಲಿ ದಿನಾಂಕ: 04/10/2008 ರಲ್ಲಿ ಸಮಿತಿಗೆ

ನೀಡಿದ ಸೂಚನೆ ಪತ್ರಕ್ಕೆ ಮುಂದಿನ ಆದೇಶದವರೆಗೆ ತಡೆ ನೀಡಿದೆ. ಸದರಿ ಆದೇಶವನ್ನು ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಂಡು ವಿವರವಾದ ವರದಿಯನ್ನು ಸಲ್ಲಿಸಲು ದಿನಾಂಕ: 17/03/2009ರಲ್ಲಿ ಮಂಗಳೂರು ಸಮಿತಿಯ ಕಾರ್ಯದರ್ಶಿಗೆ ಕೃಷಿ ಮಾರಾಟ ನಿರ್ದೇಶನಾಲಯದಿಂದ ಸೂಚನೆ ನೀಡಲಾಗಿದೆ. ನಂತರದಲ್ಲಿ ಮಾರುಕಟ್ಟೆ ಸಮಿತಿಯು 77 ವರ್ತಕರ ವಿರುದ್ಧ ದಿನಾಂಕ: 23/03/2009 ರಲ್ಲಿ ಸ್ಥಳೀಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತದೆ.

ಇ) ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 14024/2008 ವಿಚಾರಣೆಯಲ್ಲಿದ್ದು, ತೀರ್ಪು ಬಂದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

ಹಿಂಡಲಗಾ ಜೈಲು ಸಿಬ್ಬಂದಿಗಳ ಸೌಲಭ್ಯ

196(303) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್:(ಜಮಖಂಡಿ) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂನ ಹಿಂಡಲಗಾ ಜೈಲಿನಲ್ಲಿರುವ ಸಿಬ್ಬಂದಿ ಎಷ್ಟು?

ಆ) ಎಷ್ಟು ಸಿಬ್ಬಂದಿಗಳಿಗೆ ಸರ್ಕಾರದಿಂದ ವಸತಿ ವ್ಯವಸ್ಥೆ ಮಾಡಲಾಗಿದೆ?

ಇ) ಸದ್ಯಕ್ಕೆ ಅಸ್ತಿತ್ವದಲ್ಲಿರುವ ಹಳೆಯ ಕಾಲದ ವಸತಿಗೃಹಗಳಿಗಿರುವ ಸೌಲಭ್ಯಗಳೇನು?

ಈ) ಈ ವಸತಿಗೃಹಗಳನ್ನು ಪುನರ್ ನಿರ್ಮಿಸಿ ಯೋಗ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಉಮೇಶ್ ವಿ ಕತ್ತಿ(ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ಬೆಳಗಾವಿ ಹಿಂಡಲಗಾ ಜೈಲಿನಲ್ಲಿ ಹಾಲಿ 136 ಜನ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಒಟ್ಟಾರೆ 114 ಅಧಿಕಾರಿ/ಸಿಬ್ಬಂದಿಗಳಿಗೆ ಇಲಾಖಾ ವತಿಯಿಂದ ವಸತಿಗೃಹ ವ್ಯವಸ್ಥೆ ಮಾಡಲಾಗಿದೆ. ಉಳಿದ ಸಿಬ್ಬಂದಿಗಳು ಸ್ವಂತವಾಗಿ ವಸತಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.

ಇ) ಸದ್ಯಕ್ಕೆ ಅಸ್ತಿತ್ವದಲ್ಲಿರುವ ಹಳೆಯ ಕಾಲದ ವಸತಿಗೃಹಗಳ ಮೇಲ್ಛಾವಣಿ ಹಂಚಿನಿಂದ ಕೂಡಿದ್ದು, ಪ್ರತಿ ನಾಲ್ಕು ವಸತಿಗೃಹಗಳಿಗೆ ಒಂದರಂತೆ